# ಪತ್ರಿಕಾ ವರದಿ

ಬೆಂಗಳೂರು, ಜೂನ್ 12, 2025,

ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ಅಧಿಕಾರ ಸ್ವೀಕರಿಸಿದ ಡಾ. ಎಸ್. ಸೋಮನಾಥ್; ಪುನಾರಚಿತ ಆಡಳಿತ ಮಂಡಳಿಯ ಘೋಷಣೆ.

ಇಂದು, ಜೂನ್ 12, 2025. ಖ್ಯಾತ ವಿಜ್ಞಾನಿ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯ ಮಾಜಿ ಅಧ್ಯಕ್ಷರಾದ **ಡಾ. ಎಸ್ ಸೋಮನಾಥ್** ಅವರು ಅಧಿಕೃತವಾಗಿ ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ಅಧಿಕಾರ ಸ್ವೀಕರಿಸಿ, ತಮ್ಮ ಪದಗ್ರಹಣ ಭಾಷಣದಲ್ಲಿ ವಿಶ್ವವಿದ್ಯಾಲಯದ ಭವಿಷ್ಯವನ್ನು ರೂಪಿಸುವ ಸ್ಪಷ್ಟ ದೃಷ್ಟಿಕೋನವುಳ್ಳ ಸ್ಫೂರ್ತಿದಾಯಕ ಮಾತುಗಳನ್ನಾಡಿದರು. ಚಾಣಕ್ಯದ ಶೈಕ್ಷಣಿಕ ಸಮುದಾಯವು ಸಾಂಪ್ರದಾಯಿಕ ಮಾನದಂಡಗಳನ್ನು ಮೀರಿ ಪ್ರತೀ ವಿದ್ಯಾರ್ಥಿಯ ಪಾತ್ರ ಮತ್ತು ಸಾಮರ್ಥ್ಯವನ್ನು ರೂಪಿಸುವ ನಿಟ್ಟಲ್ಲಿ ಸಾಗುತ್ತಾ, ಭಾರತೀಯ ಸಂಸ್ಕೃತಿಯ ತಳಹದಿಯಲ್ಲಿ ರೂಪುಗೊಂಡ ಆಧುನಿಕ ನಳಂದ ಹಾಗೂ ತಕ್ಷಶಿಲಾವಾಗಬೇಕೆಂದರು.

ಡಾ. ಸೋಮನಾಥ್ ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳ ನಡುವೆ ಇರುವ ಭಾರೀ ಕಂದಕವನ್ನು ಉಲ್ಲೇಖಿಸಿದರು. ಎಲ್ಲಾ ಶೈಕ್ಷಣಿಕ ಸಂಶೋಧನೆಗಳೂ ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರಬೇಕು. ಆ ನಿಟ್ಟಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ಪರಿಣಾಮಕಾರಿ ಹಾಗೂ ಆವಿಷ್ಕಾರಿ ಸಂಶೋಧನೆಗಳಲ್ಲಿ ಚಾಣಕ್ಯ ವಿಶ್ವವಿದ್ಯಾಲಯವು ಮುಂಚೂಣಿಯಲ್ಲಿ ಇರಬೇಕೆಂದು ಪ್ರೋತ್ಸಾಹಿಸಿದರು.

ಬೆಳವಣಿಗೆ, ಆವಿಷ್ಕಾರ, ಸಹಕಾರ ಇತ್ಯಾದಿ ಧನಾತ್ಮಕ ಮೌಲ್ಯಗಳು ಅತ್ಯುತ್ಕೃಷ್ಟ ಮಟ್ಟದಲ್ಲಿರುವ ಪರಿಸರವನ್ನು ನಿರ್ಮಿಸುವುದರ ಮೂಲಕ ಚಾಣಕ್ಯ ವಿಶ್ವವಿದ್ಯಾಲಯವು ವಿಶ್ವಾದ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಆಕರ್ಷಿಸುವ ಕೇಂದ್ರವಾಗಿ ರೂಪಿಸಬೇಕೆಂದೂ ಹೇಳಿದರು.

ವಿಶ್ವವಿದ್ಯಾಲಯದ ಪ್ರಯಾಣದಲ್ಲಿ ನೂತನ ಪರಿವರ್ತನಾತ್ಮಕ ಅಧ್ಯಾಯವೆನ್ನಬಹುದದ ಈ ಕಾರ್ಯಕ್ರಮದಲ್ಲಿ ಸಂಸ್ಥಾಪಕ ಕುಲಾಧಿಪತಿಗಳಾದ ಪ್ರೊ. ಎಂ. ಕೆ. ಶ್ರೀಧರ್, ಸಹ ಕುಲಾಧಿಪತಿಗಳಾದ ಶ್ರೀ ಎಂ. ಪಿ. ಕುಮಾರ್, ಉಪ ಕುಲಪತಿಗಳಾದ ಪ್ರೊ. ಯಶವಂತ್ ಡೋಂಗ್ರೆ, ಸಹ ಉಪಕುಲಪತಿಗಳಾದ ಪ್ರೊ. ಎಚ್. ಎಸ್. ಸುಬ್ರಹ್ಮಣ್ಯ, ಮುಖ್ಯ ಕಾರ್ಯನಿರ್ಹಣಾಧಿಕಾರಿಗಳಾದ ಶ್ರೀ ನಾಗರಾಜ್ ರೆಡ್ಡಿ, ಕುಲಸಚಿವರು, ಡೀನ್‌ಗಳು, ವಿಭಾಗದ ಮುಖ್ಯಸ್ಥರುಗಳು, ಅಧ್ಯಾಪಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಚಾಣಕ್ಯ ವಿಶ್ವವಿದ್ಯಾಲಯದ ಕಾಯ್ದೆಗೆ ಅನುಗುಣವಾಗಿ ಶೈಕ್ಷಣೀಕ ಹಾಗೂ ಔದ್ಯೋಗಿಕ ಕ್ಷೇತ್ರದ ಮುಂಚೂಣಿ ನಾಯಕರನ್ನು ಒಳಗೊಂಡಿರುವ ವಿಶ್ವವಿದ್ಯಾಲಯವು ತನ್ನ ಆಡಳಿತ ಮಂಡಳಿಯ ಪುನರ್ರಚನೆಯನ್ನು ಸಹ ಘೋಷಿಸಿತು. ಡಾ ಸೋಮನಾಥ್ ಅವರು ಹೊಸದಾಗಿ ರಚಿಸಲಾದ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

- **ಪ್ರೊ. ಎಂ. ಕೆ ಶ್ರೀಧರ್** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಅಧ್ಯಕ್ಷರು, ಶೈಕ್ಷಣೀಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ, ಬೆಂಗಳೂರು
- **ಶ್ರೀ. ಎಂ. ಪಿ ಕುಮಾರ್,** ಉಪ ಕುಲಾಧಿಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ

- **ಪ್ರೊ. ಯಶವಂತ ಡೋಂಗ್ರೆ,** ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ
- **ಶ್ರೀ. ಕ್ರಿಸ್ ಗೋಪಾಲಕೃಷ್ಣನ್,** ಅಧ್ಯಕ್ಷರು, ಆಕ್ಸಿಲರ್ ವೆಂಚರ್ಸ್, ಸಹ ಸಂಸ್ಥಾಪಕರು, ಇನ್ಫೋಸಿಸ್
- **ಶ್ರೀ. ಟಿ. ವಿ. ಮೋಹನ್ ದಾಸ್ ಪೈ,** ಅಧ್ಯಕ್ಷರು, ಆರಿನ್ ಕ್ಯಾಪಿಟಲ್ ಪಾರ್ಟ್ನರ್ಸ್
- **ಪ್ರೊ. ಬಿ. ಮಹದೇವನ್,** ವಿಶ್ರಾಂತ ಪ್ರಾಧ್ಯಾಪಕರು, ಐಐಎಮ್ ಬೆಂಗಳೂರು
- **ಶ್ರೀ. ನಾಗರಾಜ್ ರೆಡ್ಡಿ,** ಕಾರ್ಯದರ್ಶಿಗಳು, ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ
- **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
- **ಪ್ರೊ. ಸುಶಾಂತ್ ಟಿ. ಜೋಶಿ,** ಕುಲಸಚಿವರು, ಚಾಣಕ್ಯ ವಿಶ್ವವಿದ್ಯಾಲಯ

ಭಾರತೀಯ ಕಾಲಾತೀತ ನಾಗರೀಕತೆಯ ಮೌಲ್ಯಗಳಲ್ಲಿ ನೆಲೆಗೊಂಡಿರುವ ಕಲಿಕೆ, ನಾವೀನ್ಯತೆ ಹಾಗೂ ಸಾಮಾಜಿಕ ಪರಿವರ್ತನೆಯ ಜಾಗತಿಕ ಕೇಂದ್ರವಾಗಲು ಆಶಿಸುವ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಈ ಕ್ರಿಯಾತ್ಮಕ ನಾಯಕತ್ವದ ತಂಡವು ಒಂದು ದಿಟ್ಟ ನೂತನ ಅಧ್ಯಯವನ್ನು ಸೂಚಿಸುತ್ತದೆ.

**ಪ್ರಕಟಣೆ: ಸಂವಹನ ಕಛೇರಿ । ಚಾಣಕ್ಯ ವಿಶ್ವವಿದ್ಯಲಯ । ದಿನಾಂಕ 12 ಜೂನ್ 2025**